

> ಮಹಿಳಾ ಸಾಹಿತ್ಯ ಅನ್ನುವ ಹಣೆಪಟ್ಟಿಯ ಆಗತ್ಯವೇ ಇಲ್ಲದೆ ಇವತ್ತಿನ ಸಾಹಿತ್ಯ ಸತ್ವಭರಿತವಾಗಿದೆ. ಹೊಸ ಹೊಸ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಮಹಿಳೆ ತನ್ನ ಅನುಭವಗಳನ್ನು ಸಶಕ್ತವಾಗಿ ಸಾಹಿತ್ಯದಲ್ಲಿ ಬಿಂಬಿಸುತ್ತಿದ್ದಾಳೆ

ಸತ್ವಭರಿತವಾಗಿದೆ. ಹೊಸ ಹೊಸ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಮಹಿಳೆ ತನ್ನ ಅನುಭವಗಳನ್ನು ಸಶಕ್ತವಾಗಿ ಸಾಹಿತ್ಯದಲ್ಲಿ ಬಿಂಬಿಸುತ್ತಿದ್ದಾಳೆ. ಹಿಂದೊಂದು ಕಾಲದ ಅನಗತ್ಯ ಮುಜುಗರ, ಹಿಂಜರಿಕೆ ಇಲ್ಲದೆ ದಿಟ್ಟವಾಗಿ ಬರೆಯುತ್ತಿರುವ ಹೊಸ ಲೇಖಕಿಯರ ಬರವಣಿಗೆಯ ಕುರಿತು ನನಗೆ ಅಪಾರ ಮೆಚ್ಚುಗೆ, ಅಭಿಮಾನ ಎಲ್ಲವೂ ಇದೆ. ನಾನು ಯಾರಿಗೂ ಕಡಿಮೆ ಇಲ್ಲ ಅನ್ನುವಂತಾ ಈ ಬೆಳವಣಿಗೆಯ ಎದುರು ಹೆಣ್ಣುಮಕ್ಕಳು ಬರೆಯುತ್ತಿರುವ ಸಾಹಿತ್ಯ ಅನ್ನುವ ವರ್ಗೀಕರಣದ ಅಗತ್ಯವೇ ಇಲ್ಲ.

**▸ ಪ್ರಶಸ್ತಿಗಳಲ್ಲಿ ನಡೆಯುವ ಲಾಬಿ, ಗುಂಪುಗಾರಿಕೆಯ ಬಗ್ಗೆ ಏನೆನ್ನಿಸುತ್ತದೆ?**

ಒಂದೇ ಪದದಲ್ಲಿ ಹೇಳಬೇಕೆಂದರೆ ಅಸಹ್ಯ. ಇಂತಹ ಪ್ರಶಸ್ತಿಗಳಿಗೆ ಏನು ಬೆಲೆ? ಇಂತವರ ಒಳಮರ್ಮ ಗೊತ್ತಿರುವವರಿಗೆ ಸತ್ಯ ಗೊತ್ತೇ ಇರುತ್ತದೆ.

**▸ ಇಂದಿನ ವಿಮರ್ಶಾ ಕ್ಷೇತ್ರದ ಕುರಿತು ನಿಮ್ಮ ಅನಿಸಿಕೆಗಳೇನು? ಕನ್ನಡ ವಿಮರ್ಶೆಯಿಂದ ನಿಮ್ಮ ಸಾಹಿತ್ಯಕ್ಕೆ ಯಾವ ಬಗೆಯ ಸಹಾಯ ಆಗಿದೆ ಮತ್ತು ಓದುಗರಿಂದ ನಿಮ್ಮ ಬರವಣಿಗೆ ಬಗ್ಗೆ ಏನನ್ನು ನಿರೀಕ್ಷಿಸುತ್ತೀರಿ?**

ಒಂದು ಕೃತಿ ಒಳ್ಳೆಯದ್ದೋ, ಕೆಟ್ಟದ್ದೋ, ಸಾಧಾರಣದ್ದೋ ಅನ್ನುವುದನ್ನು ವಿಮರ್ಶೆ ಮಾಡೋದು ಕಾಲ. ಕೃತಿಯಲ್ಲಿ ಗಟ್ಟಿತನ ಇದ್ದರೆ ಅದು ಎಂತಹ ವಿಮರ್ಶೆಯನ್ನಾದರೂ ಜೀರ್ಣಿಸಿಕೊಂಡು ತಲೆ ಎತ್ತಿ ನಿಲ್ಲುತ್ತದೆ. ಇಂದಿನ ವಿಮರ್ಶಾಕ್ಷೇತ್ರ ಇರಲಿ, ಹಿಂದಿನದೇ ಇರಲಿ, ವಿಮರ್ಶೆ ಅಂದರೆ ಒಬ್ಬ ವ್ಯಕ್ತಿಯ ಸ್ವಂತದ ಅಭಿಪ್ರಾಯ ಅಂತ ನನ್ನ ಅನಿಸಿಕೆ, ಒಬ್ಬರ ವಿಮರ್ಶೆ ಅಭಿಪ್ರಾಯ ಎಲ್ಲರದ್ದೂ ಆಗಿರಬೇಕಿಲ್ಲ. ನನ್ನ ಕೃತಿಗಳ ಬಗ್ಗೆ ಪತ್ರಿಕೆಗಳಲ್ಲಿ ವಿಮರ್ಶೆ ನಡೆಸಿದ್ದು ತುಂಬಾ ಕಮ್ಮಿ. ಇಲ್ಲ ಅನ್ನದ ಹಾಗೆ ನನ್ನ 'ಮೃಗತೃಷ್ಣ' ನಾಟಕದ ಕುರಿತು ಬಹಳಷ್ಟು